Regd No BG 155 18-10-1969

SATYAVADI Daily, MYSORE 4 ★ 53 rd Year of Publication

ಸತ್ಯವಾದಿ ಮಹೋತ್ಸವ ನಡೆಸಿಕೊಟ್ಟ ಪತ್ರಿಕೆ

ಸತ್ಯವಾದಿ

Golden Jubilee Celebrated Paper

ಸ್ಥಾಪಕರು: ಆರಮನೆ ಸಿರಸ್ತೇದಾರ್ ಎಂ. ವಿ ಸುಬ್ಬರಾವ್ ಸಂಪಾದಕ : ಧರ್ಮಪ್ರಚಾರನಿರತ ಎಂ. ಎಸ್. ಕೃಷ್ಣ ರಾವ್ [2 ಪೈಸೆ

ಚಂಡೀಘರ್‌ಗಾಗಿ ಪ್ರಚಂಡ ಪ್ರದರ್ಶನ

ನಿನ್ನೆಯ 'ಸತ್ಯವಾದಿ' ಸಂಪಾದಕರ ದಿನಚರಣೆ

ಆಗಾಖಾನರ ನೆಲ

ನವಡೆಹಲಿ— ಆಗಾಖಾನರನ್ನು ಮದುಯಾಗಲಿರುವ ಲೇಡಿ ಜೇಮ್ಸ್ ಕ್ರಿಟ್ಚಿ ಸ್ಟುವರ್ಟ್ ಮುಸ್ಲಿಂ ಜಾತಿಗೆ ಮತಾಂತರಗೊಂಡು ಸಲೀಮಾ (ಶಾಂತಿ) ಎಂದು ಹೆಸರಿಟ್ಟುಕೊಂಡಳು – ಪ್ಯಾರಿಸ್ಸಿನ ಇಮಾಂರು ಈ ಕಾರ್ಯ ನೆರವೇರಿಸಿದರು.

○

ಡಾ ॥ ಮೋದಿ

ನೇತ್ರದಾನಿ ಪದ್ಮಭೂಷಣ ಡಾ ॥ ಎಂ ಸಿ ಮೋದಿಯವರು ಗದಗ್‌ನಲ್ಲಿ ಉಚಿತ ನೇತ್ರ ಆಪರೇಷನ್ ಶಿಬಿರ ನಡೆಸಿದರು.

★

ಭಾರತ ಅತಿ ಬಲಾಢ್ಯ

ಲಂಡನ್— ದಕ್ಷಿಣ ಏಷ್ಯಾ ಆಲ್ಲಿ ಮಿಲಿಟರಿಯಲ್ಲಿ ಭಾರತವು ಅತಿ ಬಲಶಾಲಿಯೆಂದು ಟೈಮ್ಸ್ ಪತ್ರಿಕೆ ಪ್ರಕಟಿಸಿದೆ

○

ದಿವ್ಯವಾಣಿ

ಸುಳ್ಳು ಹೇಳದವನಿಗೆ ಸತ್ಯವೇನೆಂಬುದು ತಿಳಿಯದು. — ನೆಪ್ಚೂನ್

ವಿಶ್ವದಲ್ಲೇ ಅತಿ ಆಳದ ಗಣಿ

ನವಡೆಹಲಿ— ಕೋಲಾರದ ಚಿನ್ನದ ಗಣಿಗಳು ವಿಶ್ವದಲ್ಲೇ ಅತಿ ಆಳವಾಗಿರುವ ದೆಂದೂ, ಭೂಮಿಯೊಳಗೆ 3250 ಮಾಟರು ಛಾಂಪಿರ್ಯನ್ ರೀಫ್‌ನಲ್ಲಿ ಆಗೆಯಲಾಗಿದೆಯೆಂದೂ ಪ್ರಕಟವಾಗಿದೆ – 69–70 ರಲ್ಲಿ 2 78 ಮಿಲಿಯ ಗ್ರಾಂ ಚಿನ್ನದ ಉತ್ಪಾದನೆ ಅಂದಾಜು ಮಾಡಲಾಗಿದೆ – 90 ವರ್ಷಗಳಿಂದ ನಡೆಯುತ್ತಿರುವ ಚಿನ್ನದ ಗಣಿಗಳಲ್ಲಿ 764 ಮಿಲಿಯ ಗ್ರಾಂ ಚಿನ್ನ ಉತ್ಪಾದಿಸಲಾಗಿದೆ.

WANTED

Inte ested bus nessmen and others to work full / part time representatives in every city of India for a firm of repute having numerous branches to sell Colgate - Forhan's - Binaca Products ; Ponds - Afghan - Hazeline snow and creams ; Osram - Philips - electric bulbs and likewise about 200 standard items of comp titive rates on pay scale Rs. 150 to Rs. 500 with other business benefits according to sale Please apply : with s lf-addressed stamped envelope for detailed information.

Correspondence in English only.

G P O. BOX No: 102
KANPUR

ಪ್ರಚಂಡ ಪ್ರದರ್ಶದ

ಚಂಡೀಘರ್— ಎಂದೂ ನಡೆಯದಂಥ ಬಹು ಭಾರಿ ಪ್ರದರ್ಶನವನ್ನು, ಚಂಡೀಘರ್ ಮೇಲೆ ಹಕ್ಕು ಒಡ್ಡುತ್ತಿರುವ ಪಂಜಾಬಿನ ಎಲ್ಲ ಪಕ್ಷಗಳ ಕ್ರಿಯಾ ಸಮಿತಿ ನಿನ್ನೆ ಏರ್ಪಡಿಸಿತ್ತು – 85000 ಜನ ಭಾಗವಹಿಸಿದ್ದರು – ಮೆಲಹಳ್ಳಿಯಿಂದ ಹೊರಟ ಈ ಮೆರವಣಿಗೆ ಜನರಿಗೆ ತೆಲ್ಲೇ ಊಟದ ಏಪಾರಡೂ ಇತ್ತು.

★

ಕುರುಡ ಪದವೀಧರ

ನವಡೆಹಲಿ— ಕೆಲಸ ಕೇಳಿಕೆಗಾಗಿ 5 ದಿನಗಳಿಂದ ಉಸವಾಸದಲ್ಲಿ ತೊಡಗಿದ ಕುರುಡ ಪಿಹೆಚ್. ಡಿ. ಪದವೀಧರ ಡಾ॥ ಸಕೆಹಟ್ ರಾಂಡೇರಜಾನಿಗೆ ಡೆಲ್ಲೀ ಆಡಳಿತವು ಲೆಕ್ಚರರ್ ಕೆಲಸ ಕೊಟ್ಟಿದೆ.

★

ಕಾಂಗ್ರೆಸ್ ಅಧ್ಯಕ್ಷರ ಬದಲಾವಣೆಯೇ

ನವಡೆಹಲಿ– 1971 ರ ಬದಲು ಮುಂದಿನ ವರ್ಷವೇ ಹೊಸ ಕಾಂಗ್ರೆಸ್ ಅಧ್ಯಕ್ಷರನ್ನು ಚುನಾಯಿಸಬೇಕೆಂಬ ಚಳವಳಿಗೆ ಪ್ರಧಾನಿ ಇಂದಿರಾರು, ಚವ್ಹಣರು, ಜಗಜೀವನ್ ರಾಂ ಸೇರಿ ಅನೇಕ ಹಿರಿಯ ಕಾಂಗ್ರೆಸಿಗರು ಆಶೀರ್ವದಿಸಿರುವರು – ಈ ಬಗ್ಗೆ ಸಹಿ ಸಂಗ್ರಹ ಪ್ರಾರಂಭವಾಗಿದೆ.

○

ವ್ಯವಸಾಯ ಸಾಲಗಾರರು

ಬೆಂಗಳೂರು— ವ್ಯವಸಾಯ ಸಾಲಗಾರರ ಪರಿಹಾರ ಶಾಸನ ವಿರುದ್ಧ 1500 ಹೆಚ್ಚು ರಿಟ್ ಅರ್ಜಿ ವಿಚಾರಣೆ ಹೈಕೋರ್ಟಿನಲ್ಲಿ 13 ದಿನಗಳು ನಡೆದು ತೀರ್ಪು ಕಾದಿಡಲಾಗಿದೆ.

ಮಂತ್ರಿಗಳ ರಾಜೀನಾಮೆ

ತ್ರಿವೇಂದ್ರಂ— 12 ಮಂದಿ ನಂಬೂದರಿಪಾದರ ಮಂತ್ರಿಮಂಡಲದಲ್ಲಿ 6 ಮಂದಿ ರಾಜೀನಾಮೆ ಕೊಟ್ಟರು.

●

ಶತಮಾನೋತ್ಸವ ರೈಲು

ಮೈಸೂರು— ಗಾಂಧೀ ಶತಮಾನೋತ್ಸವ ರೈಲು ಇಲ್ಲಿಗೆ ತಾ॥ 23 ಅರ್ಧರಾತ್ರಿ ನಂತರ ಬಂದು ನೂರನೇ ದಿನ ಇಲ್ಲಿರುತ್ತೆ.

★

ಕ್ರಿಕೆಟ್ ಇನ್ಷೂರೆನ್ಸ್

ಹೈದರಾಬಾದು— ವಿಮಾ ಇತಿಹಾಸದಲ್ಲೇ ಪ್ರಪ್ರಥಮವಾಗಿ ಕ್ರಿಕೆಟ್ ಮ್ಯಾಚು ಮಳೆಗಾಗಿ ರದ್ದಾದರೆ ನಷ್ಟಕ್ಕಾಗಿ ಹೈದ್ರಾಬಾದು ಕ್ರಿಕೆಟ್ ಆಸೋಸಿಯೇಷನ್ ನ್ಯೂ ಜಿಲ್ಯಾಂಡು 3 ಟೆಸ್ಟ್‌ಗಳಲ್ಲಿ ಇಂತಹ ನಷ್ಟ ಬಗ್ಗೆ ರೂ 33000 ಕ್ಕೆ ಇನ್ಷೂರ್ ಮಾಡಿದೆ.

★

1 ಲಕ್ಷ ಜನರಿಗೆ ಬಟ್ಟೆ ದಾನ

ಕಲ್ಕತ್ತಾ— ಪೂಜಾ ಕಾಲದಲ್ಲಿ ಪಶ್ಚಿಮ ಬಂಗಾಳ ಸರಕಾರವು ಎಲ್ಲಾ ಶಾಸನ ಸಭಾ ಕ್ಷೇತ್ರಗಳಲ್ಲೂ ಬಡವರಿಗೆ ಬಟ್ಟೆ ದಾನ ಮಾಡಲಿದೆ – 1 ಲಕ್ಷ ಜನರು ಈ ಪ್ರಯೋಜನ ಹೊಂದುವರು.

★

ಕಾವೇರಿ ಸ್ನಾನ

ವೀಡಕೇರಿ— ತುಲಾ ಸಂಕ್ರಮಣ ಪ್ರಯುಕ್ತ ನಿನ್ನೆ ' ಚಿನ್ನದ ನದಿ " ಕಾವೇರಿ ಮೂಲಸ್ಥಾನವಾದ ತಲಕಾವೇರಿಯಲ್ಲಿ ಸಹಸ್ರಾರು ಜನ ಸ್ನಾನಮಾಡಿದರು.

"Bank Road Bahusar – A Fair Price Shop in Actual Practice"

ಗಾಂಧೀಜೀಯರ ಕ್ಷೌರಕ

ಚಿಕ್ಕಬಳ್ಳಾಪುರ— ಮಹಾತ್ಮಾ ಗಾಂಧಿಯವರು 1936 ರಲ್ಲಿ ನಂದೀಬೆಟ್ಟದಲ್ಲಿ ತಂಗಿದ್ದಾಗ ನಂದೀಬೆಟ್ಟದ ಹತ್ತಿರ ಸುಲ್ತಾನ್‌ಪೇಟೆಯಲ್ಲಿದ್ದ ವೆಂಕಟಪ್ಪನು ಆವರ ಕ್ಷೌರಿಕನಾಗಿದ್ದನು ; ಈತನು ಇತ್ತೀಚೆಗೆ ಮರಣಪಟ್ಟನು. ಮಹಾತ್ಮಾ ಗಾಂಧಿಯವರು ಈತನಿಗೆ ರೂ 5 ನಾಣ್ಯಗಳನ್ನು ಕೊಟ್ಟಿದ್ದರು. ಅದನ್ನು ಹಾಗೆಯೇ ಇಟ್ಟುಕೊಂಡಿದ್ದು, ಅದನ್ನು ವಿಲೇವಾಡದೇ ಇಟ್ಟುಕೊಂಡಿರಬೇಕೆಂದು ತನ್ನ ಮಗನಿಗೆ ಆತನು ಸೂಚಿಸಿರುವನು.

ವಿಗ್ರಹಗಳ ಕಳುವು

ಚಾಮರಾಜನಗರ— ಹರದನಹಳ್ಳಿಯಲ್ಲಿನ ದಿವ್ಯಲಿಂಗೇಶ್ವರಸ್ವಾಮಿ ದೇವಾಲಯದಲ್ಲಿ 5 ವಿಗ್ರಹಗಳು ಕಳುವಾಗಿದೆ.

ಬದ್ರೀನಾಥ್ ದೇವಾಲಯ

ಶ್ರೀನಗರ— ಈ ವರ್ಷ ಮಂಜು ಬೀಳುವುದು ಬೇಗನೇ ಪ್ರಾರಂಭವಾಗಿರುವದರಿಂದ ಬದ್ರೀನಾಥ್, ಕೇದಾರನಾಥ್, ದೇವಾಲಯಗಳನ್ನು ನವೆಂಬರಿನ ಎರಡನೇ ವಾರದಲ್ಲಿ ಮುಚ್ಚಲಾಗುವುದು.

ಭೂಮಿ ಹಂಚಿಕೆ

ಬೆಂಗಳೂರು— 12 ಲಕ್ಷ ಎಕ್ರೆ ಭೂಮಿಯನ್ನು ಸರಕಾರ ಈ ವರ್ಷದೊಳಗೇ ಭೂಮಿ ಇಲ್ಲದವರಿಗೆ ಮತ್ತು ಹರಿಜನರಿಗೆ ಕೊಡಲಿರುವದೆಂದು ಮುಖ್ಯ ಮಂತ್ರಿಯವರು ಜಿಲ್ಲಾಧಿಕಾರಿಗಳ ಸಭೆಯಲ್ಲಿ ತಿಳಿಸಿದರು.

ರಾಜ್ಯದಲ್ಲಿ ಲಾಟರಿ

ಬೆಂಗಳೂರು— ರಾಜ್ಯದಲ್ಲಿನ ಲಾಟರಿಯನ್ನು ಗುರುವಾರ ಮುಖ್ಯಮಂತ್ರಿಯವರು ಆರಂಭಿಸಿದರು.

ಪ್ರಮುಖ ವರ್ತಮಾನಗಳಿಗೆ ಆಕರ್ಷಣೀಯ ಲೇಖನಗಳಿಗೆ
ಧಾರ್ಮಿಕ ವಿಚಾರಗಳಿಗೆ ಸತ್ಯವಾದಿ ದಿನಪತ್ರಿಕೆಯನ್ನು ತಪ್ಪದೆ ಓದಿ
ಅದರಲ್ಲಿ ಜಾಹಿರಾತು ಪ್ರಕಟನೆ ಲಾಭದಾಯಕ
ಸ್ಥಳದಲ್ಲಿ ಚಂದಾ ತಿಂಗಳಿಗೆ 40 ಪೈಸೆ; ಅಂಚೆವೆಚ್ಚ ಸೇರಿ ವರ್ಷಕ್ಕೆ ರೂ 10-00
ಸೋಮವಾರ ಸಂಚಿಕೆ ವರ್ಷಕ್ಕೆ ರೂ 2

ದೇಶದ ಹಿತಕಾಗಿ
ಕುಟುಂಬ ಯೋಜನೆ

SHAKTI
SUDHA
A Superb Tonic

ವುಡ್‌ಲಾಂಡ್ ತಾ. 10-10-69 ರಿಂದ
ಶಿ ನ ಅಮೋಘ ಪ್ರಾರಂಭ
— ಮನಮೋಹಕ ಹಿಂದಿ ಚಿತ್ರ — ಈಸ್ಟ್‌ಮನ್ ಕಲರ್ —
ಹಸೀನಾ ಮಾನ್ ಜಾಯೇಗಿ
ಶಶಿಕಪೂರ್ ಬಬಿತಾ ಜಾನಿವಾಕರ್
ಸಂಗೀತ : ಕಲ್ಯಾಣಜಿ ಆನಂದಜಿ
[ದಿನ 3 ಪ್ರದರ್ಶನಗಳು]

ಆಪೇರಾ— 10-10-69 ರಿಂದ
.... ಅಮೋಘ ತಮಿಳು ಚಿತ್ರ ....
ಎಂಗವೀಟ್ಟು ಪಿಳ್ಳೆ
ಪಾತ್ರ— ಎಂ. ಜಿ. ಆರ್ ಬಿ. ಸರೋಜಾದೇವಿ ಎಸ್. ವಿ. ರಂಗರಾವ್
ನಾಗೇಶ್ ತಂಗವೇಲು (ಹೊಸ ಕಾಪಿ)
ದಿನ 3 ಆಟಗಳು

Help The Gorakshana

ಗೋರಕ್ಷಣಾ ಮತ್ತು ವ್ಯಾಸಂಗದಲ್ಲಿ ಆಸಕ್ತಿಯುಳ್ಳ ಬಡ ವಿದ್ಯಾರ್ಥಿಗಳಿಗೆ
ಗೋರಕ್ಷಣಾ ಬೋರ್ಡಿಂಗ್ ಹೌಸ್

Protect the Cow

Quality Printing — Neat Binding
Lakshminarasimha Press
Sivarampet, Mysore

Edited, Printed & Published by Dharmaprachara Nirata M S Krishna Rao (Proprietor) at the Satyavadi Press Chamarajapura, Mysore 4